# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟೆ

## ಟೆಂಡರ್ ಅಧಿಸೂಚನೆ ಸಂಖ್ಯೆ: 01 /2026.

## ದಿನಾಂಕ: 17-09-2026.

ವಿಷಯ: ಮುಧೋಳ ನ್ಯಾಯಾಲಯದ ಆವರಣದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾದ ಉಪಹಾರಗೃಹವನ್ನು ನಡೆಸಲು ಆಸಕ್ತಿದಾರರಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.

*****

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮುಧೋಳ ನ್ಯಾಯಾಲಯದ ಆವರಣದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾದ ಉಪಹಾರಗೃಹವನ್ನು ನಡೆಸಲು ಆಸಕ್ತಿದಾರರಿಂದ ನಿಗಧಿತ ನಮೂನೆಯಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯದ ಸುತ್ತೋಲೆ ಸಂಖ್ಯೆ: 01/2005 ದಿನಾಂಕ: 13-06-2005 ರಲ್ಲಿ ವಿಧಿಸಲಾದ ನಿಯಮಗಳ ಹಾಗೂ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಮುಚ್ಚಿದ ಲಕೋಟೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಟೆಂಡರ್ ಅಧಿಸೂಚನೆ ಪ್ರತಿಯನ್ನು ಹಾಗೂ ಅರ್ಜಿಯ ನಮೂನೆಯನ್ನು ಜಿಲ್ಲಾ ನ್ಯಾಯಾಲಯದ ಅಧಿಕೃತ ಅಂತರ್ ಜಾಲತಾಣವಾದ https://bagalkot.dcourts.gov.in/notice-category/tenders ರಲ್ಲಿ ಪಡೆಯಬಹುದಾಗಿದೆ.

| | | |
|---|---|---|
| 01 | ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ | 18-09-2026 |
| 02 | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 03-10-2026 ಸಂಜೆ **05-00** ಗಂಟೆಯವರೆಗೆ ಮಾತ್ರ . |

ಈ ಮೇಲೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಗಣಿಸಲಾಗುವುದಿಲ್ಲ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜೆ ಎಂದು ಘೋಷಿಸಿದ ಪಕ್ಷದಲ್ಲಿ ಮರು ಕೆಲಸದ ದಿನವು ಕೊನೆಯ ದಿನಾಂಕವೆಂದು ಪರಿಗಣಿಸಲಾಗುವುದು.

### ಷರತ್ತುಗಳು

1. ಆಸಕ್ತಿಯುಳ್ಳ ಅರ್ಜಿದಾರರು ನಿಗಧಿಪಡಿಸಿದ ನಮೂನೆಯಲ್ಲಿ ಟೆಂಡರುಗಳನ್ನು ಮುಚ್ಚಿದ ಲಕೋಟೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ವಿಳಾಸಕ್ಕೆ ಸಲ್ಲಿಸತಕ್ಕದ್ದು.

2. ಉಪಹಾರ ಗೃಹದಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಪಟ್ಟಿ ಹಾಗೂ ಅವುಗಳ ಪದಾರ್ಥವಾರು ಪ್ರಮಾಣ ಹಾಗೂ ದರಗಳ ಪಟ್ಟಿಯನ್ನು ಟೆಂಡರ್ ದಸ್ತಾವೇಜಿನೊಂದಿಗೆ ಅನುಬಂಧ -2 ರಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

3. ಅರ್ಜಿದಾರರು ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸಿದ / ಪ್ರಧಾನ ಜಿಲ್ಲಾ ನ್ಯಾಯಾಧೀಶರವರಿಂದ ಅನುಮೋದಿಸಲ್ಪಟ್ಟ ದರಪಟ್ಟಿಯ ಪ್ರಕಾರವೇ ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ಸರಬರಾಜು ಮಾಡತಕ್ಕದ್ದು ಹಾಗೂ ಆಹಾರ ಪದಾರ್ಥಗಳ ದರಗಳನ್ನು ಪ್ರಧಾನ ಜಿಲ್ಲಾ ನ್ಯಾಯಾಧೀಶರ ಗಮನಕ್ಕೆ ತರದೇ ಪರಿಷ್ಕರಿಸತಕ್ಕದ್ದಲ್ಲ.

4. ಯಶಸ್ವಿ ಟೆಂಡರ್‌ದಾರರು ಪರವಾನಿಗೆ ನೀಡಿಕೆಯ ಆದೇಶವಾದ 7 ದಿನಗಳ ಒಳಗಾಗಿ ಉಪಹಾರ ಗೃಹದ ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕದ್ದು.

5. ಯಶಸ್ವಿ ಟೆಂಡರದಾರರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಧಿಸುವ ನಿಬಂಧನೆಗಳನ್ನು ಒಳಗೊಂಡ ಒಪ್ಪಂದ ಪತ್ರವನ್ನು ರೂ.100-00 ಗಳ ಛಾಪಾ ಕಾಗದದ ಮೇಲೆ ಬರೆದು ಕೊಡತಕ್ಕದ್ದು ಹಾಗೂ ಕಾಲಕಾಲಕ್ಕೆ ಬದಲಾಗುವ ಇತರೆ ನಿಯಮಗಳಿಗೆ ಬದ್ಧನಾಗಿರತಕ್ಕದ್ದು.

6. ಯಶಸ್ವಿ ಟೆಂಡರದಾರರಿಗೆ ಒಟ್ಟು ಮೂರು ವರ್ಷಗಳ ಅವಧಿಯವರೆಗೆ ಮಾತ್ರ ಉಪಹಾರ ಗೃಹವನ್ನು ನಡೆಸಲು ಪ್ರತಿವರ್ಷ ನವೀಕರಣ ಆಧಾರದ ಮೇಲೆ ಅನುಮತಿಸಲಾಗುವುದು ಒಂದು ವೇಳೆ ಷರತ್ತುಗಳ ಉಲ್ಲಂಘನೆ ಮಾಡಿದಲ್ಲಿ ಮತ್ತು ವಕೀಲರಿಂದ ಅಥವಾ ನ್ಯಾಯಾಧೀಶರುಗಳಿಂದ ಮತ್ತು ಸಿಬ್ಬಂದಿಗಳಿಂದ ದೂರುಗಳು ಬಂದರೆ ಅವುಗಳನ್ನು ಪರಿಶೀಲಿಸಿ ಪರವಾನಿಗೆಯನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಪರವಾನಿಗೆ ಅವಧಿ ಮುಗಿದ ಮೇಲೆ ಅಥವಾ ಮಧ್ಯದಲ್ಲಿಯೇ ರದ್ದಾದರೆ 15 ದಿನಗಳ ಒಳಗಾಗಿ ಸದರಿ ಉಪಹಾರ ಗೃಹವನ್ನು ಖಾಲಿ ಮಾಡತಕ್ಕದ್ದು.

7. ಅರ್ಜಿದಾರರು ಇತ್ತೀಚಿನ ಎರಡು ಭಾವಚಿತ್ರಗಳನ್ನು, ಗುರುತಿನ ಪತ್ರ ಮತ್ತು ವಿಳಾಸದ ದಾಖಲೆಯನ್ನು ತಮ್ಮ ಅರ್ಜಿಯೊಂದಿಗೆ ಹಾಜರುಪಡಿಸತಕ್ಕದ್ದು, ಅದೇ ರೀತಿ ಉಪಹಾರ ಗೃಹದಲ್ಲಿ ಕೆಲಸ ಮಾಡುವ ಕೆಲಸಗಾರರ ಗುರುತಿನ ಪತ್ರ ಹಾಗೂ ವಿಳಾಸದ ದಾಖಲೆಯನ್ನು ಕೂಡ ಹಾಜರುಪಡಿಸತಕ್ಕದ್ದು.

8. ಯಶಸ್ವಿ ಟೆಂಡರದಾರರು ಸೂಕ್ತ ಪ್ರಾಧಿಕಾರ ಅಥವಾ ಸಂಬಂಧಪಟ್ಟ ಇಲಾಖೆಗಳಿಂದ ಉಪಹಾರ ಗೃಹ ನಡೆಸಲು ಬೇಕಾಗುವ ಅನುಮತಿ ಪತ್ರವನ್ನು (ಲೈಸನ್ಸ್) ಪಡೆದುಕೊಂಡಿರತಕ್ಕದ್ದು ಹಾಗೂ ಟೆಂಡರ ದಸ್ತಾವೇಜಿನೊಂದಿಗೆ ಸಲ್ಲಿಸತಕ್ಕದ್ದು.

9. ಯಶಸ್ವಿ ಅರ್ಜಿದಾರರು ಈ ಕಚೇರಿಯಿಂದ ನೀಡಲಾಗುವ ಪರವಾನಿಗೆಯನ್ನು ಪ್ರತಿ ವರ್ಷ ಜಿಲ್ಲಾ ನ್ಯಾಯಾಲಯದಿಂದ ನವೀಕರಣಗೊಳಿಸಿಕೊಳ್ಳತಕ್ಕದ್ದು ಹಾಗೂ ಜಿಲ್ಲಾ ನ್ಯಾಯಾಲಯವು ಕಾಲಕಾಲಕ್ಕೆ ನಿಗಧಿಪಡಿಸುವ ಬಾಡಿಗೆಯನ್ನು ಭರಣಾ ಮಾಡಲು ಬದ್ದನಾಗಿರತಕ್ಕದ್ದು ಮತ್ತು ಉಪಹಾರಗೃಹದ ವ್ಯವಹಾರಕ್ಕಾಗಿ ಸೂಕ್ತ ಪ್ರಾಧಿಕಾರದಿಂದ ಪಡೆದ ಲೈಸನ್ಸನ್ನು ಕಾಲಕಾಲಕ್ಕೆ ನವೀಕರಿಸಿಕೊಳ್ಳತಕ್ಕದ್ದು. ಇವುಗಳಿಗೆ ತಪ್ಪಿದಲ್ಲಿ ಸೂಕ್ತಕ್ರಮ ಕೈಗೊಳ್ಳಲಾಗುವುದು.

10. ಯಶಸ್ವಿ ಅರ್ಜಿದಾರರು ಉಪಹಾರ ಗೃಹ ನಡೆಸಲು ಈ ಕಛೇರಿಯಿಂದ ಆದೇಶವನ್ನು ಪಡೆದ 7 ದಿನಗಳೊಳಗಾಗಿ ರೂ.10,000-00 ಗಳ ಬಡ್ಡಿರಹಿತ ಠೇವಣಿಯನ್ನು ಹಾಗೂ ಒಂದು ವರ್ಷದ ಬಾಡಿಗೆ ಹಣವನ್ನು ಮುಂಚಿತವಾಗಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮುಧೋಳ ಇವರ ಕಛೇರಿಯಲ್ಲಿ ಭರಣಾ ಮಾಡತಕ್ಕದ್ದು ಹಾಗೂ ನಿಗಧಿಪಡಿಸಿದ ಬಾಡಿಗೆಯನ್ನು ಪರವಾನಿಗೆದಾರನು ಯಾವುದೇ ಬಾಕಿ ಉಳಿಸಿದಲ್ಲಿ ಠೇವಣಿ ಹಣದಲ್ಲಿ ಕಟಾವುಗೊಳಿಸಲಾಗುವುದು.

11. ಒಂದು ವೇಳೆ ಯಾವುದೇ ಕಾರಣಕ್ಕೆ ಪರವಾಣಿಗೆಯನ್ನು ರದ್ದು ಪಡಿಸಿದ್ದಲ್ಲಿ ಮುಂಚಿತವಾಗಿ ಭರಣಾ ಮಾಡಿದ ಬಾಡಿಗೆ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

12. ಅರ್ಜಿದಾರರು ತನಗೆ ಉಪಹಾರ ಗೃಹ ನಡೆಸಲು ನೀಡಿದ ಪರವಾನಿಗೆಯನ್ನು ಹಾಗೂ ಗುರುತಿನ ಚೀಟಿಯನ್ನು ಕೇಳಿದಾಗ ಹಾಜರಪಡಿಸತಕ್ಕದ್ದು ಪರವಾನಿಗೆದಾರನು ತಾನು ಮಾತ್ರ ತನಗೆ ಮಂಜೂರಾದ ಜಾಗೆಯಲ್ಲಿ ತನ್ನ ವ್ಯವಹಾರವನ್ನು ನಡೆಸತಕ್ಕದ್ದು.

13. ಅರ್ಜಿದಾರರು ತನ್ನನ್ನು ಬಿಟ್ಟು ಬೇರೆಯವರನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತಿಲ್ಲ ಮತ್ತು ಯಾವುದೇ ಒಳಒಪ್ಪಂದ / ಪರಭಾರೆ ಮಾಡಿಕೊಳ್ಳುವಂತಿಲ್ಲ ಅಂಥಹ ವ್ಯವಹಾರ ಮಾಡಿದ್ದು ಕಂಡುಬಂದಲ್ಲಿ ಪರವಾನಿಗೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಉಪಹಾರ ಗೃಹ ನಡೆಸಲು ಯಾವುದೇ ಕಾರಣಕ್ಕೂ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.

14. ಅರ್ಜಿದಾರರು ಉಪಹಾರ ಗೃಹ ನಡೆಸಲು ನೀಡಿದ ಪರವಾನಿಗೆಯನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರ ಮಾಡುವಂತಿಲ್ಲ ಅಂಥಹ ವ್ಯವಹಾರ ಮಾಡಿದ್ದು ಕಂಡುಬಂದಲ್ಲಿ ಪರವಾನಿಗೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಗೊಳಿಸಲಾಗುವುದು.

15. ಅರ್ಜಿದಾರರು ಉಪಹಾರ ಗೃಹಕ್ಕೆ ಪಡೆಯುವ ನೀರು, ವಿದ್ಯುತಚ್ಛಕ್ತಿ ಬಿಲ್ಲು ಹಾಗೂ ಚರಂಡಿ ವೆಚ್ಚಗಳ ಜೋಡಣೆ ಮತ್ತು ಮರು ಜೋಡಣೆ ವೆಚ್ಚಗಳು ಇತ್ಯಾದಿಗಳನ್ನು ತಾನೇ ಭರಿಸತಕ್ಕದ್ದು.

16. ಅರ್ಜಿದಾರರು ತನ್ನ ಉಪಹಾರಗೃಹದ ವ್ಯವಹಾರವನ್ನು ಬೆಳಿಗ್ಗೆ 7-00 ಗಂಟೆಯಿಂದ ಸಾಯಂಕಾಲ 6-30 ರವರೆಗೆ ಮಾತ್ರ ನಡೆಸತಕ್ಕದ್ದು ಮತ್ತು ಸದರಿ ಸಮಯದಲ್ಲಿ ನ್ಯಾಯಾಲಯದ ಕಾರ್ಯಕಲಾಪಗಳಿಗೆ, ಕಕ್ಷಿದಾರರಿಗೆ, ನ್ಯಾಯವಾದಿಗಳಿಗೆ, ನ್ಯಾಯಾಲಯದ ಸಿಬ್ಬಂದಿಯವರಿಗೆ ಹಾಗೂ ವಾಹನಗಳ ಚಲನ-ವಲನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

17. ಉಪಹಾರಗೃಹ ನಡೆಸುವ ಜಾಗೆಯ ಅವಶ್ಯಕತೆ ಜಿಲ್ಲಾ ನ್ಯಾಯಾಂಗಕ್ಕೆ ಕಂಡುಬಂದಲ್ಲಿ ಪರವಾನಿಗೆದಾರನು ಸದರಿ ಜಾಗೆಯನ್ನು ನೋಟೀಸ ಮುಟ್ಟಿದ 15 ದಿನಗಳೊಳಗಾಗಿ ಖಾಲಿ ಮಾಡತಕ್ಕದ್ದು ಹಾಗೂ ಪರವಾನಿಗೆದಾರನು ಯಾವುದೇ ರೀತಿಯ ಪರಿಹಾರಕ್ಕೆ ಅರ್ಹನಾಗುವುದಿಲ್ಲ.

18. ಉಪಹಾರಗೃಹ ನಡೆಸಲು ಬೇಕಾಗುವ ಅನುಮತಿ ಪತ್ರವನ್ನು (ಲೈಸನ್ಸ) ಉಪಾಹಾರಗೃಹ ನಡೆಸುವ ಜಾಗೆಯಲ್ಲಿ ಸೂಕ್ತವಾಗಿ ಕಾಣುವಂತೆ ಪ್ರದರ್ಶಿಸತಕ್ಕದ್ದು.

19. ಸದರಿ ಉಪಹಾರ ಗೃಹದ ಕಟ್ಟಡದಲ್ಲಿ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು, ಗುಟ್ಕಾ ಸಿಗರೇಟ್, ಮಾದಕ ದ್ರವ್ಯ, ಮಾದಕ ಪಾನೀಯ ಹಾಗೂ ಇತರೆ ಯಾವುದೇ ಅನಪೇಕ್ಷಿತ ವಸ್ತುಗಳನ್ನು ಸಂಗ್ರಹಿಸಿ ಇಡತಕ್ಕದ್ದಲ್ಲ ಮತ್ತು ಮಾರಾಟ ಮಾಡತಕ್ಕದ್ದಲ್ಲ. ಸದರಿ ಉಪಹಾರ ಗೃಹದ ಉಪಯೋಗಕ್ಕೆ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳಿಗೆ ಮತ್ತು ಕಾನೂನು ಬಾಹೀರ ಚಟುವಟಿಕೆಗಳಿಗೆ ಬಳಸಿಕೊಳ್ಳತಕ್ಕದ್ದಲ್ಲ, ಒಂದು ವೇಳೆ ಬೇರೆ ಯಾವುದೇ ಉದ್ಯೋಗಕ್ಕೆ / ಉದ್ದೇಶಕ್ಕೆ ಬಳಸಿಕೊಂಡಿದ್ದು ಕಂಡುಬಂದಲ್ಲಿ ಸದರಿ ಪರವಾನಿಗೆಯನ್ನು ರದ್ದು ಪಡಿಸಲಾಗುವುದು.

20. ಸದರಿ ಉಪಹಾರ ಗೃಹದ ಕಟ್ಟಡ ಹಾಗೂ ಪರಿಸರವನ್ನು ಯಾವತ್ತೂ ಸ್ವಚ್ಛವಾಗಿ ಹಾಗೂ ಸುಸ್ಥಿತಿಯಲ್ಲಿಡತಕ್ಕದ್ದು. ಅಲ್ಲದೇ ಅಲ್ಲಿ ಉಪಯೋಗಿಸುವ ಪಾತ್ರೆ ಮತ್ತು ಇತರ

ಅಡುಗೆ ಪರಿಕರಗಳನ್ನು ಸ್ವಚ್ಛ ಹಾಗೂ ಆರೋಗ್ಯ ಪೂರ್ಣವಾಗಿರುವಂತೆ ಮತ್ತು ನೈರ್ಮಲೀಕರಣವನ್ನು ಕಾಪಾಡಿಕೊಳ್ಳತಕ್ಕದ್ದು.

21. ಉಪಹಾರ ಗೃಹಕ್ಕೆ ಹಾಗೂ ಉಪಹಾರ ಗೃಹದಲ್ಲಿ ಅಳವಡಿಸಿರುವ ವಿದ್ಯುತ್ ಉಪಕರಣಗಳು, ಪೀಠೋಪಕರಣಗಳು ಹಾಗೂ ಇತರೆ ಅಳವಡಿಕೆಗಳಿಗೆ ಹಾನಿ ಸಂಭವಿಸಿದ್ದಲ್ಲಿ ಪರವಾನಿಗೆದಾರರೇ ಜವಾಬ್ದಾರಿಯಾಗಿರುತ್ತಾರೆ.

22. ಪರವಾನಿಗೆದಾರರು ತಾವು ತಯಾರಿಸಿದ ಉಪಾಹರ /ಊಟ /ಬಿಸಿ ಮತ್ತು ತಂಪು ಪಾನೀಯಗಳು ಒಳ್ಳೆಯ ಗುಣಮಟ್ಟದಿಂದ ಕೂಡಿರತಕ್ಕದ್ದು ಹಾಗೂ ಪ್ರಚಲಿತ ಪ್ರಮಾಣಕ್ಕೆ ಪೂರಕವಾಗಿರಬೇಕು. ಅಲ್ಲದೇ ಕೇವಲ ಸಸ್ಯಾಹಾರಿ ಆಹಾರ ಪದಾರ್ಥಗಳನ್ನು ಮಾತ್ರ ತಯಾರಿಸಿ ಮಾರಾಟ ಮಾಡತಕ್ಕದ್ದು ತಪ್ಪಿದ್ದಲ್ಲಿ ಪರವಾನಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಪರವಾನಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು.

23. ಸದರಿ ಉಪಹಾರ ಗೃಹದಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳನ್ನು ಗುಣಮಟ್ಟ ಹಾಗೂ ಪ್ರಮಾಣವನ್ನು ಯಾವಾಗ ಬೇಕಾದರೂ ಪರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಸದರಿ ಉಪಹಾರ ಗೃಹದಲ್ಲಿ ತಯಾರಿಸಲಾದ ಆಹಾರ ಪದಾರ್ಥಗಳನ್ನು ಸದರಿ ಉಪಹಾರ ಗೃಹದ ಆವರಣದಲ್ಲಿ ಮಾತ್ರ ಮಾರಾಟ ಮಾಡತಕ್ಕದ್ದು.

24. ಆಸಕ್ತ ಅರ್ಜಿದಾರರು ಮೇಲಿನ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರಿಗೆ ಟೆಂಡರ್ ಪ್ರಸ್ತಾವನೆಯನ್ನು ಮೊಹರಾದ ಲಕೋಟೆಯಲ್ಲಿ ಅನುಬಂಧ-1 ರಲ್ಲಿ ದಿನಾಂಕ 30.09.2026 ರಂದು 05.00 ಗಂಟೆಯ ಒಳಗಾಗಿ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ **Tender for Running Canteen at Mudhol Court Complex** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು ಖುದ್ದಾಗಿ ಈ ಕಛೇರಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

25. ಮೊಹರಾದ ಲಕೋಟೆಯನ್ನು ದಿನಾಂಕಃ 05-10-2026 ರಂದು ಸಂಜೆ 05-30 ಗಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ಚೇಂಬರದಲ್ಲಿ ಹಾಜರಿರುವ ಅರ್ಜಿದಾರರ ಸಮಕ್ಷಮದಲ್ಲಿ ತೆರೆಯಲಾಗುವುದು ಒಂದು ವೇಳೆ ಸದರಿ ಸಮಯದಲ್ಲಿ ಯಾವುದೇ ಅರ್ಜಿದಾರರು ಹಾಜರಿರದ

ಪಕ್ಷದಲ್ಲಿಯೂ ಸಹ ಅರ್ಜಿದಾರರ ಗೈರುಹಾಜರಾತಿಯಲ್ಲಿ ಟೆಂಡರುಗಳನ್ನು ತೆರೆಲಾಗುವುದು.

ಈ ಕೆಳಗೆ ಸಹಿ ಮಾಡಿದವರು ಯಾವುದೇ ಕಾರಣವನ್ನು ನೀಡದೇ ಕೋಟೇಶನಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

(ಮಾಸ್ಟರ ಆರ್ ಕೆಜಿಎಂಎಂ ಮಹಾಸ್ವಾಮಿಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

ಸ್ಥಳಃ ಬಾಗಲಕೋಟೆ
ದಿನಾಂಕಃ 17.09.2026

ಪ್ರತಿಯನ್ನು ಪ್ರಚಾರಕ್ಕೆ ರವಾನಿಸಲಾಗಿದೆಃ

1) 3 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಬಾಗಲಕೋಟೆ, ಉಪಸ್ಥಿತಿ ಮುಧೋಳ.
2) ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮುಧೋಳ.
3) ಮಾನ್ಯ ತಹಶೀಲ್ದಾರ, ಮುಧೋಳ.
4) ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬಾಗಲಕೋಟೆ ರವರಿಗೆ ಪತ್ರಿಕಾ ಪ್ರಕಟಣೆ ಕುರಿತು.
5) ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ.
6) ವಕೀಲರ ಸಂಘ ಮುಧೋಳ, ಸೂಚನಾ ಫಲಕಕ್ಕೆ
7) ಪುರಸಭೆ ಮುಧೋಳ ಸೂಚನಾ ಫಲಕಕ್ಕೆ.

<u>ಅನುಬಂಧ-1</u>

ಇವರಿಗೆ,

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

ಮಾನ್ಯರೇ,

ವಿಷಯಃ ಮುಧೋಳ ನ್ಯಾಯಾಲಯದ ಆವರಣದಲ್ಲಿ ಉಪಹಾರ ಗೃಹ (ಕ್ಯಾಂಟೀನ್) ನಡೆಸಲು ಟೆಂಡರ್ ಸಲ್ಲಿಸುವ ಬಗ್ಗೆ.

ಉಲ್ಲೇಖಃ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ ಟೆಂಡರ್ ಪ್ರಕಟಣೆ ಸಂಖ್ಯೆ -- /2026, ದಿನಾಂಕಃ **17-09-2026.**

------

ಈ ಕೆಳಗೆ ಸಹಿ ಮಾಡಿರುವ ಶ್ರೀಮತಿ / ಶ್ರೀ ........................................................................................ ಆದ ನಾನು ಉಲ್ಲೇಖಿತ ಟೆಂಡರ್ ಪ್ರಕಟಣೆಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಮುಧೋಳ ನ್ಯಾಯಾಲಯದ ಆವರಣದಲ್ಲಿ ಉಪಹಾರ ಗೃಹ (ಕ್ಯಾಂಟೀನ್) ನಡೆಸಲು ಆಸಕ್ತರಿದ್ದು ಈ ಮೂಲಕ ಈ ಕೆಳಗಿನ ವಿವರಗಳೊಂದಿಗೆ ಟೆಂಡರ್ ಸಲ್ಲಿಸುತ್ತಿದ್ದೇನೆ ಮತ್ತು ಕ್ಯಾಂಟೀನ್ ನಡೆಸುವ ಬಗ್ಗೆ ಕರಾರನ್ನು ಮಾಡಿಕೊಳ್ಳಲು ಒಪ್ಪಿರುತ್ತೇನೆ.

| | | | |
|---|---|---|---|
| **1** | ಟೆಂಡರುದಾರರ ಹೆಸರು | : | |
| **2** | ಪೂರ್ಣ ವಿಳಾಸ | : | |
| | ಅ) ಮೊಬೈಲ್ ಸಂಖ್ಯೆ | : | |
| | ಆ) ಇ-ಮೇಲ್ ವಿಳಾಸ | : | |
| **3** | ಈ ಹಿಂದೆ ಹೋಟೇಲ್ ಉದ್ಯಮ (ಕ್ಯಾಂಟೀನ್) ನಡೆಸಿರುವ ಅನುಭವ ಹೊಂದಿದ್ದೀರಾ? | : | |
| **4** | ಹೋಟೇಲ್ ವ್ಯವಹಾರಕ್ಕಾಗಿ ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಪರವಾನಿಗೆ ಪತ್ರದ ಪ್ರತಿ. | : | |
| **5** | ಉದ್ಯಮ ಪರವಾನಿಗೆ ವಿವರಗಳು (ಪ್ರತಿಗಳನ್ನು ಲಗತ್ತಿಸುವುದು) | : | |

| | | | |
|---|---|---|---|
| | ಅ) ರಿಜಿಸ್ಟ್ರೇಷನ ನಂ. | : | |
| | ಆ) ಪ್ಯಾನ್ ನಂ. | : | |
| | ಇ) ಫ್ರಾವಿಡೆಂಟ್ ಫಂಡ್ ರಿಜಿಸ್ಟ್ರೇಷನ ನಂ. | : | |
| | ಈ) ಇ.ಎಸ್.ಐ. ರಿಜಿಸ್ಟ್ರೇಷನ ನಂ. | : | |
| | ಉ) ಜಿ.ಎಸ್.ಟಿ. ರಿಜಿಸ್ಟ್ರೇಷನ ನಂ. | : | |
| | ಊ) ಆಧಾರ ಕಾರ್ಡ ನಂ. | : | |
| **6** | ಅರ್ಜಿದಾರರ ಇತ್ತೀಚಿನ **2** ಸ್ಟ್ಯಾಂಪ್ ಅಳತೆಯ ಭಾವಚಿತ್ರ ಲಗತ್ತಿಸಲಾಗಿದೆಯೇ? | : | |
| **7** | ಅರ್ಜಿದಾರರು ನಿಗಧಿಪಡಿಸಿದ ಬಾಡಿಗೆ ಹಣ, ಭದ್ರತಾ ಠೇವಣಿ ಕೊಡಲು ಸಿದ್ಧರಿರುತ್ತಾರೆಯೇ ಮತ್ತು ಉಚ್ಚ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಹಾಗೂ ಸ್ಥಾನಿಕ ನ್ಯಾಯಾಲಯ ದವರು ವಿಧಿಸುವ ಕಟ್ಟಳೆಗಳಿಗೆ ಬದ್ಧರಾಗಿರುತ್ತಾರೆ. | : | |
| **8** | ಅರ್ಜಿದಾರರಿಗೆ ಪರಿಚಯ ಇರುವ ಇಬ್ಬರು ಸ್ಥಳೀಯ ಪ್ರಮುಖ ನಾಗರೀಕರ ಹೆಸರು ವಿಳಾಸ ಮತ್ತು ಸಹಿ. | : | |

ಮೇಲ್ಕಾಣಿಸಿದ ಮಾಹಿತಿಗಳು ನನ್ನ ತಿಳುವಳಿಕೆಯ ಪ್ರಕಾರ ಸರಿ ಇರುತ್ತವೆ. ಒಂದು ವೇಳೆ ಮೇಲ್ಕಾಣಿಸಿದ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ನನ್ನ ಹೆಸರಿನಲ್ಲಿ ಮಂಜೂರಾದ ಆದೇಶವನ್ನು ರದ್ದು ಪಡಿಸುವದರ ಜೊತೆಗೆ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳಃ
ದಿನಾಂಕಃ

ಟೆಂಡರುದಾರರ ಹೆಸರು ಹಾಗೂ ಸಹಿ ಮೊಹರಿನೊಂದಿಗೆ

**ಅನುಬಂಧ-2**

**ಮುಧೋಳ ನ್ಯಾಯಾಲಯದ ಆವರಣದಲ್ಲಿ ರುವ ಕ್ಯಾಂಟೀನ್ ಗೆ ಆಹಾರ ಪದಾರ್ಥಗಳ ಪ್ರಸ್ತಾವಿತ ದರಪಟ್ಟಿ**

**(ಮಾದರಿ)**

| ಕ್ರಸಂ. | ತಿಂಡಿ / ಪಾನಿಯಗಳ ಹೆಸರು. | ಪ್ರಮಾಣ (ml & gm) ಮತ್ತು ದರ | | ಕ್ರಸಂ. | ತಿಂಡಿ / ಪಾನಿಯಗಳ ಹೆಸರು. | ಪ್ರಮಾಣ (ml & gm) ಮತ್ತು ದರ | |
|---|---|---|---|---|---|---|---|
| | | ಪ್ರಮಾಣ | ದರ | | | ಪ್ರಮಾಣ | ದರ |
| 1 | ಟೀ | | | 20 | ಚಪಾತಿ ಊಟ | | |
| 2 | ಸ್ಪೇಷಲ್ ಟೀ | | | 21 | ಪರೋಟಾ | | |
| 3 | ಕಾಫಿ | | | 22 | ಮೊಸರು ಅವಲಕ್ಕಿ | | |
| 4 | ಬದಾಮಿ ಹಾಲು | | | 23 | ಪ್ಲೇನ್ ದೋಸೆ | | |
| 5 | ಬೋರ್ನವಿಟಾ / ಬೂಸ್ಟ್ | | | 24 | ಮಸಾಲೆ ದೋಸೆ | | |
| 6 | ಬಟ್ಟರ್ ಮಿಲ್ಕ್ / ಮಜ್ಜಿಗೆ | | | 25 | ಸೆಟ್ ದೋಸೆ | | |
| 7 | ಈರುಳ್ಳಿ ಪಕೋಡ | | | 26 | ರವಾ ದೋಸೆ | | |
| 8 | ಆಲೂ ಬೋಂಡಾ (1) | | | 27 | ರಾಗಿ ದೋಸೆ | | |
| 9 | ರವಾ ಇಡ್ಲಿ | | | 28 | ಖಾಲಿ ದೋಸೆ | | |
| 10 | ಇಡ್ಲಿ, ವಡಾ (2+ 1) | | | 29 | ಆನಿಯನ್ ಉತ್ತಪ್ಪ | | |
| 11 | ಇಡ್ಲಿ (2) | | | 30 | ಟೋಮ್ಯಾಟೊ ಬಾತ್ | | |
| 12 | ವಡಾ (1) | | | 31 | ರೈಸ್ ಬಾತ್ | | |
| 13 | ಕೇಸರಿ ಬಾತ್ | | | 32 | ಚಿತ್ರಾನ್ನ | | |
| 14 | ಉಪ್ಪಿಟ್ಟು | | | 33 | ಮಸಾಲಾ ರೈಸ್ | | |
| 15 | ಕಾರ ಚುರುಮುರಿ ಚೂಡಾ | | | 34 | ಮೊಸರನ್ನ | | |
| 16 | ಮಿರ್ಚಿ | | | 35 | ಗುಲಾಬ್ ಜಾಮೂನ್ | | |
| 17 | ಮೈಸೂರು ಬಜಿ | | | 36 | ಜೋಳದ ರೊಟ್ಟಿ ಊಟ | | |
| 18 | ಪಲಾವ್ | | | | | | |
| 19 | ಪೂರಿ (2) ಕುರ್ಮಾ/ಪಲ್ಯ | | | | | | |